modation is to be given. There are buildings constructed under the Government of India programme. Those buildings are there in Kunigal Taluk. Now we have to construct a building. If the local people come forward to construct the building then we will have no hesitation in taking up the work of hospital in Hiriyurdurga. So, first we have to consider upgrading of the hospitals in Kunigal.

ಶ್ರೀ ಡಿ ಟಿ. ಮಾಯಣ್ಣ.—ಹುಲಿಯೂರುದುರ್ಗದ ಆಸ್ಪತ್ರೆಗೆ ವಂತಿಗೆ ಮತ್ತು ಜಾಗವನ್ನು ಕೊಟ್ಟರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡುತ್ತೀರಾ ?

ಶ್ರೀ ಎ.ಕೆ. ಅಬ್ದುಲ್ ಸಮದ್.—ಮಾಡಿಕೊಡುತ್ತೇವೆ.

Gayatri Reservoir in Harihar Taluk

350 SRI S. LINGAIAH (Sira).—Will the Chief Minister be pleased to state.—

(a) whether is there any proposal before the Government for raising the height of the Gayatri reservoir:

(b) whether estimates have been prepared and what will be the amount of expenditure;

(c) the present achkat area of this reservoir;

(d) the possible extent of the Land which can be brought under irrigation, and the extent of such land both on the right and the left bank canals;

(e) by how many feet the height of the reservoir is to be raised and the extent of the area that would be submerged;

(f) whether arrangements are made to take up the work pertaining to the raising of the height of the reservoir immediately?

SRI R, GUNDU RAO (Chief Minister).—

(a) It is under consideration.

(b) Estimation : About Rs. 144 Lakhs.

(c) The present achkat area is 2367.5 Hectares. (5850 acres)

(d) The present scheme is designed to provide water to the existing achkat area and to ensure to make arrangement for permanent water supply.

(e) It is planned to raise the height of the reservoir by 1.15 metres (3.75 feet) due to this it is estimated that about 109.26 Hectares (270 acres) of forest land will be submerged.

(f) Government has not received plans and estimates of this scheme.

ಶ್ರೀ ಎಸ್. ಲಿಂಗಯ್ಯ.—ಸ್ವಾಮಿ ಪ್ರತಿವರ್ಷವೂ ಇಲ್ಲಿ ನೀರು ಸಿಕ್ಕುವುದಿಲ್ಲ ಎಂಬ ಅಂಕಿಅಂಶ ಸರ್ಕಾರದ ಗಮನದಲ್ಲಿದೆ. ತಾ॥ ೧೬ನೇ ಏಪ್ರಿಲ್ ೧೯೬೦ರಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಬರೆದು ಈ ಗಾಯಿತ್ರಿ ಜಲಾಶಯದ ಆಶ್ರಯದಲ್ಲಿರತಕ್ಕ ಅಚ್ಚುಕಟ್ಟು ಪ್ರದೇಶವು ಒಣಗುತ್ತಿದೆ, ಆದ್ದರಿಂದ ಈ ಕೂಡಲೇ ಜಲಾಶಯದ ಏರಿಯನ್ನು ಉಠಾವಣೆ ಮಾಡಿ ಅಲ್ಲಿನ ರೈತರಿಗೆ ಪರಿಹಾರವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಈ ಜಲಾಶಯದ ಅಚ್ಚುಕಟ್ಟು ಪ್ರದೇಶ ಸುಮಾರು ೫,೬೫೦ ಎಕರೆ ಏನಿದೆ ಅದಕ್ಕೆ ಪೂರ್ತಿಯಾಗಿ ನೀರನ್ನು ಕೊಟ್ಟಿಲ್ಲ. ಸುಮಾರು ೪ ಸಾವಿರ ಎಕರೆಗೆ ನೀರು ಕೊಟ್ಟಿರಬಹುದು. ಅದೂ ಕೂಡ ಸಕಾಲದಲ್ಲಿ ಕೊಟ್ಟಿಲ್ಲ ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಿ ಎಲ್ಲ ಜಮೀನಿಗೂ ನೀರನ್ನೊದಗಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆದಷ್ಟು ಬೇಗ ಈ ಏರ್ಪಾಡನ್ನು ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಲಿಂಗಯ್ಯ.—ಸ್ವಾಮಿ, ತಮ್ಮ (ಊ) ಉತ್ತರದಲ್ಲಿ ಅಂದಾಜು ಮತ್ತು ಯೋಜನೆ ಸರ್ಕಾರಕ್ಕೆ ಇನ್ನೂ ಬಂದಿಲ್ಲವೆಂದು ಹೇಳಿದ್ದೀರಿ. ತಾವು ಇದನ್ನು ಬೇಗ ತರಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಅಲ್ಲಿನ ರೈತರು ಪತ್ರಿಕೆಗಳಲ್ಲಿ ಕೂಡ ಹೇಳಿಕೆ ನೀಡಿದ್ದಾರೆ. ನಾನೂ ಕೂಡ ತಾ ೧೬ನೇ ಏಪ್ರಿಲ್ ೧೯೬೦ರಲ್ಲಿ ತಮಗೆ ಒಂದು ಪತ್ರವನ್ನು ಬರೆದಿದ್ದೇನೆ. ಆದ್ದರಿಂದ ತಾವು ಕೂಡಲೇ ಈ ಜಲಾಶಯವನ್ನು ಉಠಾವಣೆ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಇದೇ ಅಲ್ಲದೆ ನಮ್ಮ ಸಿರಾ ಟೌನ್‌ಗೆ ಕುಡಿಯುವ ನೀರಿನ ವ್ಯವಸ್ಥೆ ಕೂಡ ಮಾಡಬೇಕಾದ್ದು ಇದೆ. ಈ ನೀರು ಗಾಯಿತ್ರಿ ಜಲಾಶಯದಿಂದ ಬರಬೇಕಾಗಿದೆ. ನನಗೆ ತಿಳಿದಮಟ್ಟಿಗೆ ೩ ಸಾವಿರ ಯೂನಿಟ್‌ಸ್ಪಿಲ್‌ವೇನಲ್ಲಿ ಹೊರಗಡೆ ಬರುತ್ತದೆ. ಈ ರೀತಿ ಮಾಡುವುದಕ್ಕೆ ಫೀಸಿಬಿಲಿಟಿ ಬರುತ್ತಿಲ್ಲ.

SRI R. GUNDU RAO.—The whole matter is under detailed investigation. Let the investigation report come and then we shall decide whether it is possible to give water supply or not.

ಶ್ರೀ ಟಿ.ಬಿ. ಜಯಚಂದ್ರ. ಸ್ವಾಮಿ, ಈ ಪ್ರಶ್ನೆಯನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ಕಾರಣ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ "It is under the consideration of the Government," ಎಂದು ಹೇಳಿದ್ದೀರಿ. ಇದಕ್ಕೆನಾನು ಒಂದು ಸಲಹೆಯನ್ನು ಕೊಡುತ್ತೇನೆ. ಅಲ್ಲಿ ಈಗ ಸೇತುವೆಯೂ ಬಂದಿಲ್ಲ, ಎಸ್ಟಿಮೇಟೂ ಆಗಿಲ್ಲ. ಗಾಯಿತ್ರಿ ಜಲಾಶಯಕ್ಕೆ ನೀರು ಕೊಡಬೇಕೆಂಬುದು ಸರಿ. ಇದಕ್ಕೆ ನೀರು ಬರುವುದು ಗಂಟೇನಹಳ್ಳಿಯ ಕೆರೆಯಿಂದ. ಇದರ ಮೇಲ್ಭಾಗದಲ್ಲಿ ಗುಬ್ಬಿ ತಾಲ್ಲೂಕಿನಲ್ಲಿ ಬುಕ್ಕಾಪಟ್ಟಣದ ಒಂದು ಕೆರೆ ಇದೆ. ಇದಕ್ಕೆ ತಾವು ೨೦ ಲಕ್ಷ ರೂಪಾಯಿ ಖರ್ಚು ಮಾಡಿದ್ದರೂ ೫೦೦ ಎಕರೆ ನೀರಾವರಿ ಆಗುತ್ತಿಲ್ಲ. ಹಾಗಲ್ವಾಡಿ ಕೆರೆಗೆ ಅಂದಾಜಿನಲ್ಲಿ ೧ ಕೋಟಿ ೪೪ ಲಕ್ಷ ರೂಪಾಯಿ ಖರ್ಚು ಮಾಡುವುದಾಗಿ ತೋರಿಸಿದ್ದೀರಿ. ನಾನು ತಮಗೆ ಹೇಳುತ್ತೇನೆ ನಮಗೆ ೧ ಕೋಟಿ ಬೇಡ ಮೇಲಿನ ೪೪ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕು ಈ ೩ ಕೆರೆಗಳನ್ನು ಉಠಾವಣೆ ಮಾಡಿಸಿ ಆದರಿಂದ ಎಲ್ಲರಿಗೂ ನೀರನ್ನೊದಗಿಸಲು ವ್ಯವಸ್ಥೆ ಮಾಡುತ್ತೇವೆ. ತಾವು ಇಷ್ಟು ಹಣವನ್ನು ಖರ್ಚು ಮಾಡಿದರೆ ಯಾವ ಯಾವ ಕೆರೆಯಲ್ಲಿ ಎಷ್ಟೆಷ್ಟು ನೀರಾವರಿ ಅನುಕೂಲ ಮಾಡಿಕೊಡುತ್ತೀರೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಇದನ್ನು ತಮಗೆ ಸರಿಯಾಗಿ ಹೇಳಬೇಕೆಂದರೆ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಅದರ ವರದಿ ಬಂದನಂತರ ಅಲ್ಲಿಗೆ ನೀರು ಕೊಡುವುದಕ್ಕೆ ಸಾಧ್ಯವೇ ಅಥವಾ ಇಲ್ಲವೆ ? ಎಂಬುದನ್ನು ಯೋಚನೆ ಮಾಡೋಣ.

ಶ್ರೀ ಎಸ್. ಲಿಂಗಯ್ಯ.—ಗಾಯಿತ್ರಿಕೆರೆ, ಗಂಟೇನಹಳ್ಳಿಕೆರೆ ಇದರಲ್ಲಿ ಯಾವುದು ಮೊದಲು ಕಟ್ಟಿದ್ದು ಎಂಬುದನ್ನು ತಾವು ನೋಡಬೇಕು. ಈ ಕೆರೆಯ ಅಭಿವೃದ್ಧಿಯಾದರೆ ಸುಮಾರು ೭೦೭ ಚದರ ಮೈಲಿ ಕ್ಯಾಚ್‌ಮೆಂಟ್ ಏರಿಯಾಕ್ಕೆ ಅನುಕೂಲವಾಗುತ್ತದೆ. ಗಾಯಿತ್ರಿ ಕೆರೆ ಬಹಳ ವರ್ಷಗಳ ಹಿಂದೆ ಕಟ್ಟಿರತಕ್ಕಂಥಾದ್ದು. ಇದರ ಅಚ್ಚುಕಟ್ಟಿನ ಬಗ್ಗೆ ಸರ್ಕಾರ ಗಮನಿಸಬೇಕು. ಇದನ್ನು ತೀವ್ರಗತಿಯಲ್ಲಿ ಮಾಡುತ್ತೀರಾ ? ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಆರ್. ಗುಂಡೂರಾವ್,—ಈ ವಿಷಯ ಇನ್‌ವೆಸ್ಟಿಗೇಷನ್ ಆಗುತ್ತಿರುವುದರಿಂದ ಈಗ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ, ಅದರ ವರದಿ ಬಂದಮೇಲೆ ನೋಡ್ತೀಣವೆಂದು ನಾನು ಈಗಾಗಲೇ ಹೇಳಿದ್ದೇನೆ.

80 Km. Rural Communication Roads in each Taluk in the State.

640 SRI S. M. SHEERNALY CHANDRASHEKAR (Hosanagar).—Will the Chief Minister be pleased to state :—

(a) whether the Government has passed an order to take up 80 Km. Rural Communication Roads in each Taluk in the State;

(b) whether it has been completed in Shimoga and Hosanagar Talukof Shimoga District ;

(c) whether the Government is aware that the roads which have been completed are in a very bad condition ;

(d) theAgency which has been appointed to look after these roads formed under the said scheme for maintenance ?

SRI R. GUNDU RAO (Chief Minister).—

(a) Yes, under I.C.R.C. Programme.

(b) (a) No.

(b) The details of works approved and completed are as follows :

Name of the Taluk	No. of works approved	Length in Kms.	Work completed in all respects	
			No.	Length
Shimoga	20	100.00	6	33.2 km.
Hosanagar	14	82.40	6	32.00 km.

(c) a) Shimoga Taluk : The completed roads are reported to be in good condition.

b) Hosanagar Taluk : Out of 6 works completed, 5 work are in good condition. The other one work is not in good condition as the road runs in slushy tracts and is subjected to heavy rainfall, being situated in Malnad area.

(d) The roads constructed under ICRC programme are to be maintained either by Taluk Development Board or Public Works Department whichever is incharge of these roads. At present ICRC roads completed in all three phases are maintained by PWD and a grant of